ಅಬ್ದುಲ್ಲನ ಕೈಯಿಂದ ರಿಮೋಟ್ ಇಸಿದುಕೊಂಡು ತಿಮೋತಿ ಚಾನೆಲ್ ಬದಲಿಸಿದ. ಅಲ್ಲಿ ಪ್ರತಿಪಕ್ಷದ ನಾಯಕರು ಉಗ್ರವಾಗಿ ಮಾತಾಡುತ್ತಿದ್ದರು.

'ಸಿಎಂ ಮಾಡ್ತಾ ಇರೋ ರೋಡ್ ಶೋ ಒಂದು ರಾಜಕೀಯ ಗಿಮಿಕ್ ಅಲ್ಲದೆ ಬೇರೇನಲ್ಲ. ಒಂದು ವಾರ ಆದ್ರೂ ಇವರಿನ್ನೂ ನೆರೆಸಂತ್ರಸ್ಥ ಹಳ್ಳಿಗಳ ಒಂದು ವೈಮಾನಿಕ ಸಮೀಕ್ಷೆ ಮಾಡಿಲ್ಲ. ಇಲ್ಲಿ ರಾಜಧಾನಿಯಲ್ಲಿ ಅವರ ಹೆಸರಲ್ಲಿ ಭಿಕ್ಷಾಟನೆ ಮಾಡ್ತಾ ಇದಾರೆ. ಅರವತ್ತು ಸಾವಿರ ಕೋಟಿ ಬಜೆಟ್ ಮಂಡನೆ ಮಾಡುವ ಇವರಿಗೆ ಇಪ್ಪತ್ತು ಸಾವಿರ ಕೋಟಿಯ ನೆರವನ್ನು ಕೇಂದ್ರ ಯಾಕೆ ಕೊಡಬೇಕು? ಈವರೆಗೆ ಕೇಂದ್ರದಿಂದ ಬಂದಿರುವ ನೆರೆಪರಿಹಾರದ ಹಣ ಎಷ್ಟು? ಸಾರ್ವಜನಿಕರಿಂದ, ಮಠಾಧೀಶರಿಂದ, ಉದ್ಯಮಿಗಳಿಂದ ಸಂಗ್ರಹವಾಗಿರುವ ದೇಣಿಗೆಯ ಹಣ ಎಷ್ಟು? ರಾಜ್ಯ ಸರ್ಕಾರ ಈವರೆಗೆ ನೆರೆ ಸಂತ್ರಸ್ಥರಿಗಾಗಿ ಮಾಡಿರುವ ಪರಿಹಾರ ಕಾರ್ಯದ ಸ್ವರೂಪ ಏನು? ಸಂಗ್ರಹಿತ ಹಣ, ಲಭ್ಯ ಸಂಪನ್ಮೂಲಗಳು, ಹಮ್ಮಿಕೊಂಡ ಪರಿಹಾರ ಕಾರ್ಯಗಳ ಅಂದಾಜು ವೆಚ್ಚ, ಉಳಿಯುವ ಮೊತ್ತ, ಈ ಎಲ್ಲ ಮಾಹಿತಿಯನ್ನಿವರು ಸಮಗ್ರವಾದ ಶ್ವೇತಪತ್ರ ಹೊರಡಿಸುವ ಮೂಲಕ ಜನತೆಯ ಮುಂದಿಡಬೇಕು..'

'ಅಂದಂಗ ಇವತ್ತಿನ ಪ್ರೋಗ್ರಾಂ ಎಕ್ಕಡಿಗಿರಿ?' ಕೇಳಿದ ತಿಮೋತಿ.

'ಸರ್, ಹರ್ಯಾಣದ ಒಬ್ಬ ಸ್ಟುಡೆಂಟ್ ಎರಡು ಲಾರಿ ಪಾತ್ರೆ ಪಗಡಿ ತಗಂಡಾನ. ಎಲ್ಲ ಸ್ಟೀಲಿನವು. ಹಂಚಾಕ ಬರಬೇಕು ಅಂದಾನ' "ಸ್ಟುಡೆಂಟಾ?' ಅಂದು ಹುಬ್ಬೇರಿಸಿದ ತಿಮೋತಿ.

'ಹೌದ್ಸರ್. ಮೆಡಿಕಲ್ ಸ್ಟುಡೆಂಟ್. ಅವರಪ್ಪ ದೊಡ್ಡ ಬಿಜಿನೆಸ್‌ಮನ್ ಅಂತ. ಸ್ವಲ್ಪ ಇವನಿಗೆ ಸೋಶಿಯಲ್ ಯಾಕ್ಟಿವಿಟೀಸ್‌ನ್ಯಾಗ ಇಂಟರೆಸ್ಟ್ ಜಾಸ್ತಿ'

'ಸೇಮ್ ಅದೇ ಟೀಮಲ? ಬಾಲಕೃಷ್ಣ?' ಕೇಳಿದ ತಿಮೋತಿ.

'ಇಲ್ಲ ಸರ್ ಅತ ಬರದಿಲ್ಲ. ಆತನ್ದು ಕೆಲಸ ಆಯ್ತು' ಅಂದ ಅಬ್ದುಲ್ಲ.

'ಅಂದ್ರೆ?'

'ಅವರ ಎನ್‌ಜಿಓ ಸಲುವಾಗಿ ಒಂದಿಷ್ಟು ಫೋಟೋಸ್ ಬೇಕಿದ್ವು. ಅದ್ಕೆ ಎರಡು ದಿವ್ಸ ಬಂದಿದ್ದ. ಕೊಟ್ಟೆ. ಮುಗೀತು'

'ಏನ್ರಿ ಹಂಗಂದ್ಬುಟ್ರಿ?'

'ಅಷ್ಟೇ ಸರ್. ಒಂದು ಟೀಮ್ ಮಾಡಿಕೆಂಡು ಹೋಗಿ ಪರಿಹಾರ ಸಾಮಗ್ರಿ ಹಂಚುತ್ತಿರುವ ಬಾಲಕೃಷ್ಣ ಅಂತ ಫೋಟೊ ರೆಕಾರ್ಡ್ ಬೇಕು. ಫಂಡ್ಸ್ ಮೊಬಿಲೈಜ್ ಮಾಡಿಕೆಂತಾರ'

'ಅಲ್ರಿ, ಇವರಿಗಿಂತ ಹರ್ಯಾಣದ ಸ್ಟುಡೆಂಟೇ ಸಾವಿರ ಪಾಲು ವಾಸಿ ಅಲ್ರಿ ಅಬ್ದುಲ್. ತೀರಾ ಈ ಮಟ್ಟಕ್ಕ ಇರುತ್ತ ಅನಕಂಡಿರಲಿಲ್ಲ ಬುಡ್ರಿ' ಅಂದ ತಿಮೋತಿ ಶಾಕ್‌ಗೊಳಗಾದವನಂತೆ.

'ಏನ್ ಸರ್ ಇಂಗಂತೀರಿ? ಭಾಳ ಹೊಲಸಾದ ಇದ್ರಾಗ. ಅವರು ಹೇಳಿದಂಗ ಕೇಳ್ತೀನಂದ್ರೆ ಈಗುನೂ ನನಗ ಬೆಂಗಳೂರಿನ್ಯಾಗ ಒಂದು ಎನ್‌ಜಿಓದ ಹೆಡ್ಡಾಫೀಸಿನ್ಯಾಗ ಕೆಲಸ ಆದ. ಲಕ್ಷಾಂತರ ದುಡೀಬಹುದು. ಆದ್ರೆ ನಮಗ ಸ್ವಾತಂತ್ರ್ಯ ಇರದಿಲ್ಲ. ಈಗ ನಾನಿರ ಎನ್‌ಜಿಓದ ಬಾಸ್ ಚೊಲೋ ಅದಾರ. ಡೋನರ್ಸ್‌ನ ಹಿಡ್ದು ಮಳೆ ಸಂತ್ರಸ್ತ ಏರಿಯಾಗುಳಾಗ ವರ್ಕ್ ಮಾಡ್ತೀವಿ ಸರ್. ವೆಹಿಕಲ್, ಸ್ಟಾಫ್ ಬಳಸಿಕೆಂಬಕ ಪರ್ಮಿಶನ್ ಬೇಕು ಅಂದೆ. ಓಕೆ ಅಂದ್ರು. ಪ್ರೊಟೋಕಾಲ್ ಅಂತ ಕೇಳ್ಬೇಕು ಅಷ್ಟೆ. ಎಂದೂ ಬ್ಯಾಡಂದಿಲ್ಲ'

'ಬೆಂಗ್ಳೂರಿಂದು ಯಾವ್ದದು ಎನ್‌ಜಿಓ? ಯಾವ ಫೀಲ್ಡ್‌ನ್ಯಾಗ ಕೆಲಸ ಮಾಡುತ್ತ?'

'ವೇಶ್ಯೆಯರಿಗೆ ಏಡ್ಸ್ ಹರಡದಂಗ ಕಾಂಡೋಮ್ ಬಳಕೆ ಬಗ್ಗೆ ಅವೇರ್ನೆಸ್ ಮೂಡಿಸದು'

'ಚೊಲೋನೇ ಐತಲ್ರಿ?'

'ಐತೆ ಸಾರ್. ಇಲ್ಲೆ ಒಂತಿಂಗಳ ಅದ್ರಾಗ ಕೆಲಸ ಮಾಡಿದೆ ನಾನು. ಅವರನ್ನ ಎಜುಕೇಟ್ ಮಾಡಿ, ಸೆಲ್ಫ್ ಎಂಪ್ಲಾಯ್‌ಮೆಂಟ್ ಮಾಡಿಸಿ ಮೇನ್‌ಸ್ಟ್ರೀಮ್‌ಗೆ ಸೇರಿಸದರ ಬಗ್ಗೆ ಅವರಿಗಿ ಆಸಕ್ತಿ ಇಲ್ಲ. ಅವರು ಅದೇ ವೃತ್ತಿಯಾಗೇ ಮುಂದುವರಿಬೇಕು, ಅವರ ಮಕ್ಳೂ ಪ್ರಾಸ್ಟಿಟ್ಯೂಟ್ಸೇ ಆಗ್ಬೇಕು. ಕಾಂಡೋಮ್ ಹಂಚಿಕೆಂತ ಅದರ ನೇಚರ್‍ನ್ಯಾಗ ಸಣ್ಣ ಬದಲಾವಣೆ ತಂದಂಗಿರಬೇಕು. ಹಂಗಾದ್ರೆ ಇವರ ಪ್ರಾಜೆಕ್ಟು ಇರ್ತಾದ, ಫಂಡ್ಸು ಬರ್ತಿರ್ತಾವ..'

'ಸರ್ ಗಾಡಿ ಬಂತು, ಎಲ್ಲರು ಬಂದಾರ, ಶಿವಶರಣ ಅವರು ಬಂದಾರ ಇವತ್ತು' ಅಂದ ಅಮರೇಶ.

'ಓಕೆ. ಸರ್ ಓಗಮ್ರಾ?' ಅಂದು ಎದ್ದ ಅಬ್ದುಲ್ಲ.

ಮುಂದಿನ ಲಾರಿಯಲ್ಲಿ ಡ್ರೈವರನ ಜೊತೆ ಶಿವಶರಣ. ಹಿಂದಿನ ಲಾರಿಯಲ್ಲಿ ಹರಿಯಾಣದ ಮೆಡಿಕಲ್ ಸ್ಟೂಡೆಂಟ್ ರಣಜಿತ್. ಅವೆರಡರ ಹಿಂದೆ ಕೊನೆಯಲ್ಲಿ ಅಬ್ದುಲ್ಲನ ಟೀಮು ಹೊತ್ತ ಟಾಟಾ ಸುಮೊ. ಜಮತ್ನಳ್ಳಿಗೆ ತಲುಪಿದಾಗ ಸರಿಸುಮಾರು ಮಧ್ಯಾಹ್ನ ಹನ್ನೆರಡು ಗಂಟೆ. ಊರು ಹತ್ತಿರಾಗುತ್ತಿದ್ದಂತೆ ಕ್ಯಾಬಿನ್ ಬಾಗಿಲು ತೆಗೆದು ಹೊರನಿಂತ ಶಿವಶರಣ

'ಎಲ್ಲರೂ ಸಾಲಿಗುಡ್ಯಲ್ಲಿ ಬರ್ರಿ. ತಾಟು, ತೆಂಬಿಗಿ, ಬೋಗುಣಿ, ಗಿಲಾಸು ಕೊಡ್ತೀವಿ. ಒಂದು ಮನೆಗೆ ಒಬ್ಬರೇ ಬರ್ಬೇಕು. ಎರಡೆರಡು ಸಲ ಬಂದ್ರೆಪಂದ್ರ ನನಗೆಲ್ಲ ಗೊತ್ತಾಗುತ್ತ' ಅಂತ ಸಾರತೊಡಗಿದ. ರಸ್ತೆಯಲ್ಲಿ ತಿರುವಿದ್ದುದರಿಂದ ಸುಮೋದ ಮುಂದಿನ ಸೀಟಲ್ಲಿ ಕುಳಿತಿದ್ದ ತಿಮೋತಿಗೂ ಇದು ಕಾಣಿಸಿತು.

'ಏನ್ರೀ ಇದು ಅಬ್ದುಲ್?' ಅಂದ ತಿಮೋತಿ. ಈವರೆಗಿನ ಅವರ ಕಾರ್ಯಾಚರಣೆಯೆಲ್ಲ ಹೀಗೆ ಢಣಾಢಂಗೂರವಾಗಿ ಇರಲೇ ಇಲ್ಲವಲ್ಲ ಎಂಬ ಪ್ರಶ್ನಾರ್ಥಕ ಭಾವದಲ್ಲಿ.

'ಇಲ್ಲ ಸರ್, ಸ್ವಲ್ಪ ಓವರ್ಯಾಕ್ಟಿಂಗಿನ ಮನುಷ್ಯ. ಪ್ರಚಾರಪ್ರಿಯ. ಆದ್ರೆ ಒಳ್ಳೆ ಕೆಲಸಗಾರ ಸರ್ ಪ್ರಾಮಾಣಿಕ' ಅಂದ ಸಮಜಾಯಿಷಿ ನೀಡುವ ದನಿಯಲ್ಲಿ.

ಸಾಲಿಗುಡಿಯ ಅಂಗಳದಲ್ಲಿ ಮೂರು ದೊಡ್ಡ ಪ್ಲಾಸ್ಟಿಕ್ ಬರಕ ತಂದು ಸ್ವಲ್ಪ ಸ್ವಲ್ಪ ಅಂತರಗಳಲ್ಲಿ ಹಾಸಿ, ಅವುಗಳ ಮೇಲೆ ಎರಡೂ ಲಾರಿಗಳ ಸಾಮಾನುಗಳನ್ನು ಸಮನಾಗಿ ಇಳಿಸಿ, ಅವುಗಳನ್ನೂ ಮತ್ತೆ ಐಟೆಮ್ ಪ್ರಕಾರ ಗುಡ್ಡೆ ಹಾಕಿಸಿದ ಮೇಲೆ ಒಂದರಲ್ಲಿ ತಾನು ಕುಳಿತುಕೊಂಡ ಶಿವಶರಣ. ಆ ಊರಲ್ಲಿದ್ದ ಅಷ್ಟೂ ಮನೆಗಳ ಪಟ್ಟಿಯನ್ನು ಡೀಸಿ ಆಫೀಸಿನ ಒಬ್ಬ ಕ್ಲರ್ಕ್ ಮೂಲಕ ಕಲೆಹಾಕಿಕೊಂಡೇ ಬಂದಿದ್ದ. ಪಕ್ಕಾ ಕೆಲಸಗಾರನೇ ಇರಬೇಕೆಂಬುದರಲ್ಲಿ ಅನುಮಾನವೇ ಇಲ್ಲದಂತೆ, ಊರ ವಾಲೇಕಾರನನ್ನು ಬೇರೆ ಕರೆಸಿಗೊಂಡಿದ್ದ.

ಇಡೀ ಲಿಸ್ಟನ್ನು ಸಂಖ್ಯಾಬಲದ ಆಧಾರದ ಮೇಲೆ ಮೂರು ಭಾಗವಾಗಿಸಿ ಮೂರು ತಂಡಗಳಿಗೆ ಕೊಟ್ಟು, ಪ್ರತಿ ಕುಟುಂಬಕ್ಕೆ ಒಂದು ಸಲ ತಲಾ ಎರಡೆರಡು ಬೋಗುಣಿ, ತಾಟು, ತೆಂಬಿಗಿ ಮತ್ತು ಗ್ಲಾಸುಗಳನ್ನು ಕೊಟ್ಟು ಲಿಸ್ಟಿನಲ್ಲಿ ಅವರ ಸೈನು ತೆಗೆದುಕೊಳ್ಳಬೇಕೆಂದು ಎಲ್ಲರಿಗೆ ಡೈರೆಕ್ಷನ್ ಕೊಟ್ಟ. ಅವನ ಕ್ರಿಯಾಶೀಲತೆ, ನಾಯಕತ್ವ ಗುಣ, ಜನರನ್ನು ನಿಭಾಯಿಸುವ ಶೈಲಿಗೆ ತಿಮೋತಿ ಬೆರಗಾದ. ಆದರೆ ಅವನ ರೀತಿಯೆಲ್ಲ ಅದೆಲ್ಲವನ್ನು ತಾನೇ ಕೊಂಡು ತಂದು ಹಂಚುತ್ತಿರುವಂತಿತ್ತು. ಹರ್ಯಾಣದ ಹುಡುಗನಿಗೆ ಭಾಷೆ ಗೊತ್ತಿರಲಿಲ್ಲ, ಅಬ್ದುಲ್ಲ ಮತ್ತವನ ಟೀಮಿಗೆ ತೋರಿಕೆ ಗೊತ್ತಿರಲಿಲ್ಲ. ಶಿವಶರಣನಿಗೆ ಇಷ್ಟು ಸಾಕಾಗಿತ್ತು ಸ್ಕೋಪ್ ತಗೊಳ್ಳಲು.

ಜನ ತಂಡೋಪತಂಡವಾಗಿ ಧಾವಿಸತೊಡಗಿದರು. ಆದರೆ ಶಿವಶರಣನನ್ನು ಮೆಚ್ಚಬೇಕು. ಅವನದು ಎಲ್ಲದರಲ್ಲೂ ಒಂದು ಶಿಸ್ತು. ಶಿಸ್ತು ತಪ್ಪಿದರೆ ಅವನು ಹರ್ಯಾಣದ ವಿದ್ಯಾರ್ಥಿ ರಣಜಿತ್‌ಗಾದರೂ ಬೈಯುವವನೇ, ಅಬ್ದುಲ್ಲ ಮತ್ತವನ ಟೀಮಿಗಾದರೂ ಬೈಯುವವನೇ. ಅಷ್ಟೇ ಏಕೆ ಸಮರ್ಪಕ ಪಾತ್ರೆ ಹಂಚಿಕೆಗೆ ನೆರವಾಗುತ್ತಿದ್ದ ಊರ ವಾಲೇಕಾರನಿಗೂ ಝಾಡಿಸುವವನೇ. ಅವನ ಜೋರು ಬಾಯಿ, ಗಲಾಟೆ ವ್ಯಕ್ತಿತ್ವಗಳಿಂದಾಗಿಯೇ ಅಲ್ಲಿ ಎಲ್ಲವೂ ಸುಸೂತ್ರವಾಗಿ ನಡೆದಿತ್ತು.

ಒಂದರ್ಧ ಗಂಟೆ ಇದೆಲ್ಲ ಸಮರ್ಪಕವಾಗಿ ನಡೆಯುತ್ತ ಹಳಿ ಮೇಲೆ ಬಂದ ಮೇಲೆ ಜನರಿಗೂ ಈ ವ್ಯವಸ್ಥೆ ಅರಿವಾಗಿ ನೀಟಾಗಿ ಸಾಲಲ್ಲಿ ಬಂದು ಸಾಮಾನು ಪಡೆದು ಸಹಿ ಮಾಡಿ ಮೂರು ಸ್ಟಾಲುಗಳಲ್ಲಿ ಎಲ್ಲಿಯೇ ಪಾತ್ರೆಗಳನ್ನು ಪಡೆದುಕೊಂಡರೂ ಶಿವಶರಣನ ಸ್ಟಾಲಿಗೆ ಬಂದು `ನಿನಗ ಪುಣ್ಯ ಬರ್ಲಿ ಎಪ್ಪ' ಎಂದು ನಮಸ್ಕರಿಸಿ ಹೋಗತೊಡಗಿದರು.

ಹುಸೇನ್‌ಬಿ ಪಾತ್ರೆ ತಗೊಂಡ ಮೇಲೆ ಶಿವಶರಣನಿಗೆ ತನ್ನ ಮೂವತ್ತು ಮೇಕೆಗಳ ಸಾಮೂಹಿಕ ಸಾವಿನ ದಾರುಣ ಫೋಟೊಗಳನ್ನು ತೋರಿಸಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಬಂದವರನ್ನೆಲ್ಲ ಸರ್ಕಾರಿ ಅಧಿಕಾರಿಗಳೆಂದು ಭಾವಿಸಿಕೊಂಡು ಪರಿಹಾರಕ್ಕಾಗಿ ಅಂಗಲಾಚುತ್ತ ಸತ್ತಿರುವ ತನ್ನ ಮೂವತ್ತು ಮೇಕೆಗಳ ಫೋಟೊ ತೋರಿಸುವುದು ಅವಳಿಗೆ ದಿನಚರಿಯೇ ಆಗಿಬಿಟ್ಟಿತ್ತು. ಶಿವಶರಣನಿಗೆ ಇದೆಲ್ಲ ಗೊತ್ತಿಲ್ಲ.

"ಏನಂಗೆ ನಿಂದು? ಸಾಮಾನು ತಗಂಡಿದ್ಯಾ ಇಲ್ಲಾ?" ಎಂದು ಜಬರಿಸಿದ.

(ಸಶೇಷ)